'ಅಪ್ಪ.'

'ಪರವಾಯಿಲ್ಲ; ನಿದ್ರಿಸುತ್ತಿದ್ದಾರಲ್ಲವೇ?' ಆತ ಅವಳ ಭುಜ ಸವರಿದ.

ಅವಳು ಹೇಳಿದಳು: 'ನಾನು ಎಲ್ಲ ವಿಷಯಗಳನ್ನು ತಿಳಿದೆ!'

ಆತ ಕೇಳಿದ: 'ಇಂದು ನಾನು ಬರುತ್ತೇನೆಂದು ಹೇಗೆ ಗೊತ್ತಾಯಿತು?'

'ನನಗೆ ಹಾಗೆ ಅನ್ನಿಸಿತು! ಭಾರ್ಗವಿ ಕೇಳಿದಳು: 'ಎರಡು ಮೂರು ದಿನ ಎಲ್ಲಿ ಕಳೆದಿರಿ?'

'ಹೊಲೆಯರ ಗುಡಿಸಲಿನಲ್ಲಿ.'

'ಹೊಲೆಯರ ಗುಡಿಸಲಿನಲ್ಲೊ?'

'ಹೌದು... ಎಂತಹ ಬಾಳುವೆ?'

'ತಾವು ತುಂಬಾ ಕಷ್ಟಪಡುತ್ತಿದ್ದೀರಲ್ಲವೇ!'

'ಪ್ರಯೋಜನವಿಲ್ಲ... ಅವರನ್ನೆಲ್ಲ ಕಾಣಬೇಕು. ಯಾರಿಗೋ ಬೇಕಾಗಿ ರಾತ್ರಿಹಗಲು ದುಡಿಯುತ್ತಿದ್ದೇನೆ. ಹೀಗಿರುವ ಬಡಜನರ ಸಮೂಹವೇ ದೇಶದ ಜನಸಂಖ್ಯೆಯಲ್ಲಿ ಹೆಚ್ಚಿನ ಭಾಗ ಇರುವುದು? ಉಡಲು ಬಟ್ಟೆಯಿಲ್ಲ, ಹಸಿವೆಯಡಗಿಸಲು ಆಹಾರವಿಲ್ಲ. ಒಂದಕ್ಕೂ ಓದು ಬರಹವೂ ಗೊತ್ತಿಲ್ಲ! ವೈದ್ಯಕೀಯ ನೆರವಿಲ್ಲ. ಎಂತಹ ಬದುಕು!' ಆಕಾಶದೆಡೆಗೆ ಮುಖವೆತ್ತಿದ.

ಎದೆ ಭಾಗ ನೆನೆಯುತ್ತಿರುವುದಾಗಿ ಜಗದೀಶನಿಗೆ ಅನ್ನಿಸಿತು. ಆತ ಭಾರ್ಗವಿಯ ಮುಖವನ್ನು ಮೆಲ್ಲಗೆ ಎತ್ತಿಹಿಡಿದ. ಕಣ್ಣೀರು ಒರೆಸಿ ಆತ ಕೇಳಿದ:

'ಯಾಕೆ ಅಳುವುದು?'

'ಸುಮ್ಮನೆ' ಅವಳು ನಿಟ್ಟುಸಿರಿಟ್ಟಳು.

'ನಾನು ಹೋಗಲೇನು ಚಿನ್ನಾ?'

'ತಾವು ಎಲ್ಲಿಗೆ ಹೋಗ್ತೀರಿ!' ಗದ್ಗದಿತಳಾಗಿ ಕೇಳಿದಳು.

ಆತ ಹೇಳಿದ:

'ನಾನೋ?' ಅವಳು ಬಿಕ್ಕಳಿಸಿದಳು. 'ಎಲ್ಲಿಗಾದರೂ.'

'ಎಲ್ಲಿದ್ದರೂ ನಾನು ಬರುತ್ತೇನೆ?'

ಅವಳು ಮೆಲ್ಲಗೆ ಹೇಳಿದಳು:

'ಸ್ವಲ್ಪ ಹಣ ನನ್ನ ಬಳಿಯಿದೆ.'

ತಕ್ಷಣ ಅವಳು ಹಿಂತಿರುಗಿ ನೋಡಿದಳು. ತರಗೆಲೆಗಳು ಮುರಿಯುವ ಸದ್ದು ಮೆಲ್ಲ ಮೆಲ್ಲನೆ ಯಾರೋ ಬರುತ್ತಿದ್ದಾರೆ... ಅವಳು ಬಾಯಿಬಿಟ್ಟು ಅರಚಿದಳು:

'ಅಯ್ಯೋ, ಅಪ್ಪ!'

ಜಗದೀಶ ಭಯಗೊಂಡು ಎದ್ದ. ತಕ್ಷಣ ಕಬ್ಬಿಣದ ಸಲಾಕೆ ತಲೆಯಲ್ಲಿ ಬಲವಾಗಿ ಬಿತ್ತು.

ಹೃದಯ ನಡುಗುವ ಒಂದು ನಗು; ಕಣ್ಣು ಕೋರೈಸುವ ಎಲೆಕ್ಟ್ರಿಕ್ ಬೆಳಕು!

## 3

ದಿನಗಳು ಒಂದೊಂದಾಗಿ ಎಂದಿನಂತೆ ಸರಿದು ಹೋದವು. ಎರಡು ವರ್ಷಗಳು ಪೂರ್ತಿಯಾದವು. ಕಠಿಣ ಸಜೆ ಕಳೆದು ಜಗದೀಶ ಮನೆ ಸೇರಿದ.

ಕುಶಲ ಮಾತುಕತೆಗಳು, ಪ್ರೀತಿ ಪ್ರಕಟಣೆಯ ಮಾತುಗಳ ಒತ್ತಡ ಕಡಿಮೆಯಾದಾಗ ಜಗದೀಶನನ್ನು ಅವನ ಅಮ್ಮ ಕರೆದು ಖಾಸಗಿಯಾಗಿ ಹೇಳಿದಳು: 'ನಿನ್ನನ್ನು ನೋಡುವುದಕ್ಕಾಗಿ ಯಾರೋ ಕಾದಿದ್ದಾರೆ!'